# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ
# ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ. 04/2024**

**ದೋ.ಸಾ. :10 ಫ್ರಾ.ಸಾ. : 13**

| | | |
|---|---|---|
| ಸಾಕ್ಷಿಯ ಹೆಸರು | : | ಜಯಂತಿ ಕೋಂ ಶಂಕರ ಮೊಗೇರ |
| ಗಂಡನ ಹೆಸರು | : | ಶಂಕರ ಮೊಗೇರ |
| ವಯಸ್ಸು | : | 43 ವರ್ಷ |
| ಕೆಲಸ | : | ಗೃಹಿಣಿ |
| ವಾಸ | : | ಮುರ್ಡೇಶ್ವರ |

**ದಿನಾಂಕಃ 13-03-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ-**

1. ಈ ಪ್ರಕಣದ ಚಾಸಾ-1 ರಾಮದಾಸ್ ರವರು ನನಗೆ ಗೊತ್ತು, ನಾನು ಸುಮಾರು 12 ವರ್ಷಗಳಿಂದ ಕಟಗೇರಿಯ ತೆರ್ನಮಕ್ಕಿಯಲ್ಲಿರುವ ಚಾಸಾ-1 ರವರಿಗೆ ಸೇರಿದ ಬಾಡಿಗೆ ಮನೆಯಲ್ಲಿ ವಾಸವಾಗಿರುತ್ತೇನೆ. ಸದರಿ ಮನೆಯಲ್ಲಿ ನಾನು ಮತ್ತು ನನ್ನ ಮಕ್ಕಳು ವಾಸವಾಗಿರುತ್ತೇವೆ. ನನ್ನ ಗಂಡ ಕೆಲಸದ ನಿಮಿತ್ತ ಮಲ್ಪೆಯಲ್ಲಿ ವಾಸವಿರುತ್ತಾರೆ. ತೆರ್ನಮಕ್ಕಿಯಲ್ಲಿ ಚಾಸಾ-1 ರಾಮದಾಸ್ ರವರಿಗೆ ಸೇರಿದ ಸುಮಾರು 7-8 ಬಾಡಿಗೆ ಮನೆಗಳು ಇರುತ್ತವೆ. ಈಗ ನ್ಯಾಯಾಲಯದ ವಿ.ಸಿ.ಯಲ್ಲಿ ಕಾಣುತ್ತಿರುವ ಆರೋಪಿ ನನಗೆ ಗೊತ್ತು, ಆತ ಮತ್ತು ಆತನ ಕುಟುಂಬವು ದಿ.15-10-2023 ರಂದು ನಮ್ಮ ಮನೆಯ ಪಕ್ಕದಲ್ಲಿರುವ ಬಾಡಿಗೆ ಮನೆಗೆ ಬಂದಿದ್ದು, ಅವರ ಮನೆಯಲ್ಲಿ ಆರೋಪಿ, ಆತನ ಹೆಂಡತಿ ನಂದಿನಿ ಮತ್ತು ಆತನ ಮಕ್ಕಳು ಇದ್ದರು.

2. ದಿ.17-10-2023 ರಂದು ಸಂಜೆಯ ವೇಳೆಯಲ್ಲಿ ನಾನು ಮನೆಯಲ್ಲಿ ನನ್ನ ಮಕ್ಕಳಿಗೆ ಹೋಂ-ವರ್ಕ್ ಮಾಡಿಸುತ್ತಿದ್ದ ಸಮಯದಲ್ಲಿ ಮನೆಯ ಹೊರಗಿನಿಂದ ಯಾರೋ 'ಕಾಪಾಡಿ'

ಎಂದು ಕೂಗಿಕೊಂಡ ಶಬ್ಧ ಕೇಳಿಸಿದ್ದು, ಆ ಕೂಡಲೇ ನಾನು ಮನೆಯ ಹೊರಗೆ ಬಂದು ನೋಡಿದಾಗ, ಮಣ್ಣಿನ ರಸ್ತೆಯ ಮೇಲೆ ನಂದಿನಿಯ ಕೊಲೆಯಾಗಿತ್ತು ಹಾಗೂ ಹೊಟ್ಟೆಯ ಭಾಗದಲ್ಲಿ ರಕ್ತ ಬರುತ್ತಿತ್ತು. ಆದರೆ ಆಕೆಯನ್ನು ಯಾರು ಕೊಲೆ ಮಾಡಿದರು ಎಂದು ನಾನು ನೋಡಿರುವುದಿಲ್ಲ. ಸದರಿ ದೃಶ್ಯವನ್ನು ನೋಡಿ ನಾನು ಚೀರಿಕೊಂಡಾಗ, ಚಾಸಾ–1 ಹಾಗೂ ಇತರರು ಸ್ಥಳಕ್ಕೆ ಬಂದಿರುತ್ತಾರೆ. ಆನಂತರ ಸ್ಥಳಕ್ಕೆ ಪೊಲೀಸರು ಸಹ ಬಂದಿದ್ದು, ಸ್ಥಳದಲ್ಲಿ ನನ್ನ ಸಹಿಯನ್ನು ಪಡೆದುಕೊಂಡರು ಹಾಗೂ ಫೋಟೊ ತೆಗೆದರು. ನಿಪಿ–7 ಶವಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ನಿಪಿ–7(ಸಿ) ಎಂದು ಗುರುತಿಸಲಾಯಿತು. ನಿಪಿ–2 ಫೋಟೊದಲ್ಲಿ ಸಾಕ್ಷಿಯು ತನ್ನ ಇರುವಿಕೆಯನ್ನು ನೋಡಿ ಗುರುತಿಸಿರುತ್ತಾರೆ ಹಾಗೂ ಸಾಕ್ಷಿಯು ಮುಂದುವರಿದು, ನಂದಿನಿಯು ಕೊಲೆಯಾದ ವಿಷಯಕ್ಕೆ ಸಂಬಂಧಿಸಿದಂತೆ ಪೊಲೀಸರು ಫೋಟೊ ತೆಗೆದಿರುತ್ತಾರೆ ಎಂದು ನುಡಿಯುತ್ತಾರೆ. ಹೊಟ್ಟೆಯ ಭಾಗವನ್ನು ಹೊರತುಪಡಿಸಿ, ಬೇರೆ ಯಾವ ಜಾಗದಲ್ಲಿ ರಕ್ತ ಬರುತ್ತಿತ್ತು ಎಂದು ನಾನು ನೋಡಿರುವುದಿಲ್ಲ. ಪೊಲೀಸರು ಸ್ಥಳದಲ್ಲಿ ನನ್ನ ಸಮಕ್ಷಮ ವಸ್ತುಗಳನ್ನು ಜಪ್ತುಪಡಿಸಿಕೊಂಡಿದ್ದನ್ನು ನಾನು ನೋಡಿರುವುದಿಲ್ಲ.

3. ಮೃತೆ ನಂದಿನಿ ಕೂಗಿಕೊಂಡ ಶಬ್ಧ ಕೇಳಿದ ಬಗ್ಗೆ ಹಾಗೂ ರಸ್ತೆಯ ಮೇಲೆ ಬಿದ್ದಿದ್ದ ಆಕೆಯ ಶವವನ್ನು ನೋಡಿದ ಬಗ್ಗೆ, ಭಟ್ಕಳ ನ್ಯಾಯಾಲಯದಲ್ಲಿ ಹೇಳಿಕೆಯನ್ನು ನೀಡಿರುತ್ತೇನೆ. ಸದರಿ ಹೇಳಿಕೆಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ನಿಪಿ–34 ಎಂದು, ಸಾಕ್ಷಿಯ ಸಹಿಯನ್ನು ನಿಪಿ–34(ಎ) ಎಂದು ಗುರುತಿಸಲಾಯಿತು. ನಂದಿನಿಯನ್ನು ಯಾರು ಕೊಲೆ ಮಾಡಿದರು ಎಂದು ನಾನು ಪೊಲೀಸರ ಮುಂದೆ ಹೇಳಿಕೆಯನ್ನು ನೀಡಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಮಾನ್ಯ ಅಭಿಯೋಜಕರು ಅನುಮತಿಯನ್ನು ಕೇಳುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಗಮನಿಸಿ ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಸರಕಾರಿ ಅಭಿಯೋಜಕರಿಂದಃ-**

4. ದಿ.15-10-2023 ರಂದು ಆರೋಪಿ ಹಾಗೂ ಆತನ ಹೆಂಡತಿ ನಮ್ಮ ಮನೆಯ ಪಕ್ಕದಲ್ಲಿರುವ ಚಾಸಾ-1 ರವರಿಗೆ ಸೇರಿದ ಬಾಡಿಗೆ ಮನೆಗೆ ಬಂದಾಗಿನಿಂದ ಅವರು ಸಣ್ಣಪುಟ್ಟ ವಿಷಯಗಳಿಗೆ ಜಗಳ ಮಾಡಿಕೊಳ್ಳುತ್ತಿದ್ದರು ಹಾಗೂ ಆ ವಿಷಯ ನಮ್ಮ ಮನೆಗೆ ಕೇಳಿಸುತ್ತಿತ್ತು ಎಂದರೆ ಸರಿಯಲ್ಲ. ದಿ.17-10-2023 ರಂದು ಸಂಜೆ 7.15 ಗಂಟೆಯ ಸಮಯದಲ್ಲಿ ಆರೋಪಿಯು ನಂದಿನಿಯೊಂದಿಗೆ ಜಗಳ ಮಾಡಿಕೊಳ್ಳುತ್ತಿದ್ದ ಶಬ್ಧ ನಮ್ಮ ಮನೆಗೆ ಕೇಳಿಸುತ್ತಿತ್ತು ಎಂದರೆ ಸರಿಯಲ್ಲ. ನಂದಿನಿಯು ಕೂಗಿಕೊಂಡ ವಿಷಯ ಕೇಳಿ, ನಾನು ಮನೆಯ ಹೊರಗೆ ಹೋಗಿ ನೋಡಿದಾಗ ಆರೋಪಿಯು ನಂದಿನಿಯು ಬೆನ್ನತ್ತಿಕೊಂಡು ಬಂದು ಕತ್ತಿಯಿಂದ ಆಕೆಯ ಗದ್ದದ ಕೆಳಗೆ ಹೊಡೆದಾಗ, ಆಕೆಯು ಅಲ್ಲಿಯೇ ಕೆಳಗೆ ಬಿದ್ದಳು ಎಂದರೆ ನಾನು ನೋಡಿಲ್ಲ ಎಂದು ನುಡಿಯುತ್ತಾರೆ. ಆ ಸಮಯದಲ್ಲಿ ನಂದಿನಿಯ ಮಗಳಾದ ಸಾಹಿತ್ಯಳೂ ಸಹ ಹಿಂದಿನಿಂದ ಓಡಿ ಬರುತ್ತಿದ್ದು, ನಾನು ಆಕೆಯನ್ನು ಹಿಡಿದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಚಾಸಾ-1 ರವರು ಸ್ಥಳಕ್ಕೆ ಬಂದಿದ್ದರಿಂದ ಆರೋಪಿಯು ಕೈಯಲ್ಲಿ ಕತ್ತಿಯನ್ನು ಹಿಡಿದುಕೊಂಡು ಕಂಪೌಂಡ್ ಹಾರಿ ಓಡಿ ಹೋದನು ಎಂದರೆ ನನಗೆ ನೋಡಿಲ್ಲ. ಆನಂತರ ಚಾಸಾ-1 ರವರು ಪೊಲೀಸರಿಗೆ ಫೋನು ಮಾಡಿ ಕರೆದರು ಎಂದರೆ ಸಾಕ್ಷಿಯು ಚಾಸಾ-1 ರವರು ಪೊಲೀಸರನ್ನು ಕರೆದ ಬಗ್ಗೆ ನನಗೆ ಗೊತ್ತಿಲ್ಲ ಆದರೆ, ಪೊಲೀಸರು ಸ್ಥಳಕ್ಕೆ ಬಂದಿರುತ್ತಾರೆ ಎಂದು ನುಡಿಯುತ್ತಾರೆ. ನಂತರ ಪೊಲೀಸರು ಸ್ಥಳದಲ್ಲಿ ರಾತ್ರಿ 9.30 ರಿಂದ 11.00 ಗಂಟೆಯವರೆಗೆ ಶವ ಪಂಚನಾಮೆಯನ್ನು ಮಾಡಿ, ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿ.

5. ನಾನು ಶವವನ್ನು ನೋಡಿದಾಗ, ಆಕೆಯ ಗದ್ದ, ಎದೆ, ಹೊಟ್ಟೆ ಮತ್ತು ಹಣೆಯ ಭಾಗದಲ್ಲಿ ಕತ್ತರಿಸಿದ ಗಾಯಗಳಾಗಿರುತ್ತವೆ ಎಂದರೆ ನಾನು ನೋಡಿಲ್ಲ. ಶವ ಪಂಚನಾಮೆ ಮಾಡುವ ಸಮಯದಲ್ಲಿ ಪೊಲೀಸರು ರಕ್ತ ತಾಗಿರುವ ಮಣ್ಣು, ರಕ್ತ ತಾಗದೇ ಇರುವ ಮಣ್ಣು ಹಾಗೂ ಸ್ಥಳದಲ್ಲಿ ಬಿದ್ದಿರುವ ರಕ್ತವನ್ನು ಬಿಳಿ ಬಟ್ಟೆಯಿಂದ ಸಂಗ್ರಹಿಸಿ ಹಾಗೂ ಅದರೊಂದಿಗೆ ಸಾದಾ ಬಿಳಿ ಬಟ್ಟೆಯನ್ನೂ ಸಹ ಜಪ್ತುಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಪೊಲೀಸರು ನನ್ನ ಸಮಕ್ಷಮ ವಸ್ತುಗಳನ್ನು ಜಪ್ತುಪಡಿಸಿಕೊಂಡರೂ ಸಹ, ಹಾಗೂ ಆರೋಪಿಯು ನಂದಿನಿಯನ್ನು ಕತ್ತಿಯಿಂದ ಕೊಲೆ ಮಾಡಿದ್ದನ್ನು ನೋಡಿದ್ದರೂ ಸಹ, ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ

ಎಂದರೆ ಸರಿಯಲ್ಲ. ಸಾಕ್ಷಿಯು ಪೊಲೀಸರ ಮುಂದೆ ನೀಡಿದ ಹೇಳಿಕೆಯನ್ನು ನಿಪಿ–35 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀಮತಿ ಎಸ್.ಜಿ.ಎನ್. ವಕೀಲರಿಂದಃ–**

ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

**ಮರುವಿಚಾರಣೆ – ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.
Sd/-
(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ